ಕರ್ನಾಟಕ ಸರ್ಕಾರ

ಸಂ: ಸಿಆಸುಇ 37 ಹೈಕಕೋ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 27.01.2020

**ಅಧಿಸೂಚನೆ**

ಕರ್ನಾಟಕ ರಾಜ್ಯ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕಾಗಿ ರಾಜ್ಯಪಾಲರ ವಿಶೇಷ ಜವಾಬ್ದಾರಿ) ಆದೇಶ, 2013ರ 2ನೇ ಖಂಡದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಆದೇಶ, 2013ನ್ನು ಮತ್ತಷ್ಟು ತಿದ್ದುಪಡಿಗೊಳಿಸಲು ಕರ್ನಾಟಕ ರಾಜ್ಯಪಾಲರು ಈ ಮೂಲಕ ಮುಂದಿನ ಆದೇಶವನ್ನು ಮಾಡಿರುತ್ತಾರೆ, ಎಂದರೆ:-

**ಆದೇಶ**

1. **ಹೆಸರು ಮತ್ತು ಪ್ರಾರಂಭ.-** (1) ಈ ಆದೇಶವನ್ನು ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ಆದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಸರ್ಕಾರಿ ರಾಜ್ಯ ಪತ್ರದಲ್ಲಿ ಇದರ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **3ನೇ ಖಂಡಿಕೆಗೆ ತಿದ್ದುಪಡಿ.-** ಸದರಿ ಆದೇಶದ 3ನೇ ಖಂಡಿಕೆಯಲ್ಲಿ,-

(i) (1)ನೇ ಉಪಖಂಡದಲ್ಲಿ "ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ" ಎಂಬ ಪದಗಳಿಗೆ "ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (3)ನೇ ಉಪಖಂಡದಲ್ಲಿ,-

**(ಎ)** (ಎ) ಬಾಬುವಿನಲ್ಲಿ "ಮತ್ತು ರಾಜ್ಯ ಸರ್ಕಾರವು ಆ ಪ್ರದೇಶದ ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಒಬ್ಬರನ್ನು ಅಧ್ಯಕ್ಷರೆಂದು ನಾಮ ನಿರ್ದೇಶಿಸತಕ್ಕದ್ದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

.............2

(ಬಿ) (ಬಿ1) ಬಾಬುವಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-.

"(ಬಿ2) (ಬಿ) ಮತ್ತು (ಬಿ1) ಖಂಡಗಳ ಅಡಿಯಲ್ಲಿ ನಾಮನಿರ್ದೇಶಿಸಿದ ಸದಸ್ಯರುಗಳ ಪೈಕಿ ಒಬ್ಬರನ್ನು ರಾಜ್ಯ ಸರ್ಕಾರವು ಅಧ್ಯಕ್ಷರನ್ನಾಗಿ ನಾಮನಿರ್ದೇಶಿಸತಕ್ಕದ್ದು".

**ವಜೂಭಾಯಿ ವಾಲಾ**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

V. Akkamahadevi 27/01/2020

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ
(ಹೈದರಾಬಾದ್-ಕರ್ನಾಟಕ ವಿಶೇಷ ಕೋಶ)
ಸಿ.ಆ.ಸು.ಇ

**<u>ಇವರಿಗೆ:</u>**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ (ಘಟಕ 2), ಆರ್. ವಿ ಕಾಲೇಜು ಅಂಚೆ, ಮೈಸೂರು ರಸ್ತೆ, ಬೆಂಗಳೂರು-560059 ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ IV ಎ-ನಲ್ಲಿ ತಕ್ಷಣದ ಪ್ರಕಟಣೆಗಾಗಿ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಬಳಕೆಗಾಗಿ 1000 ಪ್ರತಿಗಳನ್ನು ಸರಬರಾಜು ಮಾಡುವುದಕ್ಕಾಗಿ.

**<u>ಪ್ರತಿ:</u>**
1. ಘನತೆವೆತ್ತ ರಾಷ್ಟ್ರಪತಿಗಳ ಕಾರ್ಯದರ್ಶಿಗಳು, ರಾಷ್ಟ್ರಪತಿ ಭವನ, ನವ ದೆಹಲಿ-110001
2. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
3. ಕಾರ್ಯದರ್ಶಿಗಳು, ಕೇಂದ್ರ ಗೃಹ ಮಂತ್ರಾಲಯ, ಭಾರತ ಸರ್ಕಾರ, ಎನ್‌ಡಿಸಿಸಿ-2ನೇ ಕಟ್ಟಡ, ಜೈಸಿಂಗ್ ರಸ್ತೆ, ನವ ದೆಹಲಿ - 110001
4. ಕಾರ್ಯದರ್ಶಿಗಳು, ಕಾನೂನು ಮತ್ತು ನ್ಯಾಯ ಇಲಾಖೆ, ಭಾರತ ಸರ್ಕಾರ, ನವ ದೆಹಲಿ - 110001.
5. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು.
6. ಮಾನ್ಯ ಅಧ್ಯಕ್ಷರು, ಸಚಿವ ಸಂಪುಟ ಉಪ ಸಮಿತಿ (ಅನುಚ್ಛೇಧ 371ಜೆ) ಹಾಗೂ ಮಾನ್ಯ ಉಪ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ.
7. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

************